'ಸಣ್ಣ ಸ್ವಾಮಿಗಳು ನಿನ್ನ ನೋಡಬೇಕಂತೆ ಮೊದೀನಣ್ಣ. ಜತೆಯಲ್ಲೇ ಕರಕಂಡ್ ಬಾ ಅಂದ್ರು. ಏನೇ ಮಾಡ್ತಿದ್ದರೂ ಬಿಟ್ಟು ಬರಬೇಕಂತೆ...' ಅಂತ ಅಂಬಣ್ಣ ಶೆಟ್ಟರ ಜವಳಿ ಅಂಗಡಿ ಹುಡುಗ ಬಂದು ಕರೆದಾಗ ಮೊಹಿದ್ದೀನ್ ಅಂಗಡಿಯ ಕಸ ಗುಡಿಸುತ್ತಿದ್ದ. 'ಯಾಕಂತೆ' ಅಂತ ಕೇಳಿದ. 'ನಂಗೇನೂ ಗೊತ್ತಿಲ್ಲಪ್ಪ, ಸ್ವಾಮಿಗಳು ಶೆಟ್ಟರ ಮನೆಯಲ್ಲಿದ್ದಾರೆ. ಇವತ್ತು ಅವರಿಗೆ ಪಾದಪೂಜೆ' ಅಂತ ಹುಡುಗ ಹೇಳಿದ. ಸಣ್ಣ ಸ್ವಾಮಿಗಳು ಹೇಳಿ ಕಳಿಸುತ್ತಾರೆಂದು ಮೊಹಿದ್ದೀನ್ ಊಹಿಸಿರಲೂ ಇಲ್ಲ. ಎಂದಿನಂತೆ ಅಂಗಡಿ ಬಾಗಿಲು ತೆಗೆದು ಮೊದಲು ಕಸ ಗುಡಿಸಿ ಅಂಗಳಕ್ಕೆ ನೀರು ಚಿಮುಕಿಸಿ, ಸ್ವಲ್ಪ ಹೊತ್ತು ಕೂತಿದ್ದು ಆಮೇಲೆ ಹೊಲಿಗೆ ಮೆಷಿನ್‌ಗಳನ್ನು ಒರೆಸುವುದು ಮೊಹಿದ್ದೀನ್, ಅಲ್ಲ ಹಾಜಿ ಮೊಹಿದ್ದೀನ್ ಸಾಬರ ಅಭ್ಯಾಸ. ನಲವತ್ತು ವರ್ಷಗಳಿಂದ ಅವರ ದಿನಚರಿ ಆರಂಭವಾಗುತ್ತಿದ್ದುದು ಹೀಗೆ.

ಊರವರ ಬಾಯಲ್ಲಿ ಮೊಹಿದ್ದೀನ್ ಹೆಸರು ಮೊದೀನ್ ಆಗಿತ್ತು. ಕೆಲವರು ಅವನನ್ನು ಮೊದೀನಣ್ಣ ಅಂತ ಕರೆಯುತ್ತಿದ್ದರು. ಅರವತ್ತೈದು ವರ್ಷದ ಮೊದೀನ್ ಹುಟ್ಟಿದ್ದು, ಬೆಳೆದದ್ದು ಇದೇ ಹೊಸಳ್ಳಿಯಲ್ಲಿ. ಊರವರಿಗೆ ಮೊದೀನ್ ನಮ್ಮವನು ಎಂಬ ವಿಶ್ವಾಸ. ಅವನ ತಂದೆ ಇಮಾಂ ಹುಸೇನ್ ಸಾಬರು ಬದುಕಿದ್ದಾಗ ಊರವರ ಬಾಯಲ್ಲಿ ಇಮಾಮಣ್ಣ ಆಗಿದ್ದರು.

ಈ ಬಡ ಟೈಲರ್‌ನಿಂದ ಮಠದವರಿಗೆ ಏನಾಗಬೇಕಿದೆ? ತಕ್ಷಣ ಬರುವಂತೆ ಹೇಳಿ ಕಳಿಸಿದ್ದಾದರೂ ಯಾಕೆ? ಮಠದ ಸ್ಕೂಲಿನ ಮಕ್ಕಳಿಗೆ ಯೂನಿಫಾರಂ ಹೊಲಿದು ಕೊಡು ಅಂತ ಹೇಳಬಹುದೇ? ಒಂದು ವೇಳೆ ಅದಕ್ಕೇ ಆಗಿದ್ದರೆ, ಮುನ್ನೂರು, ನಾನ್ನೂರು ಮಕ್ಕಳ ಬಟ್ಟೆಗಳನ್ನು ಹೊಲಿದು ಕೊಡಲು ನನ್ನಿಂದ ಸಾಧ್ಯವೇ? ಅಂತ ಯೋಚಿಸುತ್ತ, 'ನೀನು ನಡಿಯಣ್ಣ, ಅಂಗಡಿ ಕಸ ಗುಡಿಸಿ ನಿನ್ನ ಹಿಂದೇ ಬರ್ತೀನಿ...' ಅಂತ ಹೇಳಿ ಹುಡುಗನನ್ನು ಸಾಗ ಹಾಕಿದ. ಸ್ವಾಮಿಗಳು ತಕ್ಷಣ ಬರುವಂತೆ ಹೇಳಿ ಕಳಿಸಿರುವಾಗ ತಡಮಾಡುವುದು ಬೇಡವೆಂದು ಅಂಗಡಿ ಮುಚ್ಚಿ ಶೆಟ್ಟರ ಮನೆ ಕಡೆಗೆ ನಡೆದ.

ಶೆಟ್ಟರ ಮನೆಯ ಅಂಗಳದಲ್ಲಿ ಜನರ ದೊಡ್ಡ ಗುಂಪೇ ಇತ್ತು. ಕೊರೊನಾ ಬಂದ ಮೇಲೆ ಸ್ವಾಮಿಗಳು ಮಠ ಬಿಟ್ಟು ಹೊರಗೆ ಬಂದಿರಲಿಲ್ಲ. ಹತ್ತು ತಿಂಗಳಾದ ಮೇಲೆ ಬಂದಿರೊ ಸಣ್ಣ ಸ್ವಾಮಿಗಳನ್ನು ನೋಡಲು ಊರ ಪ್ರಮುಖರೆಲ್ಲ ಬಂದಿದ್ದರು. ಇಬ್ಬರೂ ಸ್ವಾಮಿಗಳು ಹೊಸಳ್ಳಿಗೆ ಬಂದಾಗ ವಸತಿ ಮಾಡುತ್ತಿದ್ದುದು ಅಂಬಣ್ಣ ಶೆಟ್ಟರು ತಮ್ಮ ಮನೆಯ ಪಕ್ಕ ಕಟ್ಟಿಸಿದ್ದ ಹೊಸ ಮನೆಯಲ್ಲೇ. ಅವರ ಸ್ನಾನ, ಪೂಜೆ, ಫಲಾಹಾರ ಇತ್ಯಾದಿಗಳಿಗೆ ಅಲ್ಲಿ ಅನುಕೂಲಗಳಿದ್ದವು.

ಮೊದೀನ್, ಶೆಟ್ಟರ ಮನೆ ಅಂಗಳಕ್ಕೆ ಬಂದಾಗ ಸ್ವಾಮಿಗಳಿನ್ನೂ ಬಿಡಾರದಲ್ಲೇ ಇದ್ದರು. ಇನ್ನೇನು ಅವರು ಅಲ್ಲಿಂದ ಬಂದು ಮನೆ ಹಜಾರದಲ್ಲಿ ಕೂರುತ್ತಾರೆ ಎನ್ನುವ ನಿರೀಕ್ಷೆಯಲ್ಲಿ ಅಲ್ಲಿದ್ದವರು ಕಾಯುತ್ತ ಕೂತಿದ್ದರು. ಪಂಚಾಯ್ತಿ ಪ್ರೆಸಿಡೆಂಟರು, ಮೆಂಬರುಗಳು, ಊರಿನ ದುಡ್ಡಿನ ಕುಳ ಟಿವಿಎಸ್ ರಾಮಣ್ಣ, ಹೈಸ್ಕೂಲಿನ ಮೇಷ್ಟರುಗಳು ಸೇರಿದಂತೆ ಹಲವರು ಮನೆಯ ಜಗುಲಿ ಮೇಲೆ ಕೂತಿದ್ದರು. ಅನೇಕರು ಅಂಗಳದಲ್ಲೇ ನಿಂತಿದ್ದರು. ಮೊದೀನ್ ಮುಖ ಕಂಡದ್ದೇ ಪ್ರೆಸಿಡೆಂಟರು, 'ಬಾ ಮೊದೀನ್ ಬಾ...' ಎನ್ನುತ್ತ ಜಮಖಾನದ ಮೇಲೆ ಕೂರುವಂತೆ ಕರೆದರು. ಊರ ಮುಖಂಡರ ಜತೆ ಕೂರುವುದಕ್ಕೆ ಹಿಂಜರಿಯುತ್ತಿದ್ದ ಮೊದೀನ್ ಒತ್ತಾಯಕ್ಕೆ ಮಣಿಯಬೇಕಾಯಿತು.

ಐದಾರು ನಿಮಿಷ ಕಳೆದ ಮೇಲೆ ಸ್ವಾಮಿಗಳು ದುಡು ದುಡು ನಡೆಯುತ್ತ ಬಂದರು. ದುಂಡಗೆ, ಕೆಂಪಗೆ ಫಳಫಳ ಹೊಳೆಯುತ್ತಿದ್ದ ಅವರು ಆಗತಾನೆ ಸ್ನಾನ, ಪೂಜೆ, ಫಲಹಾರ ಮುಗಿಸಿ ಬಂದವರಂತೆ ಕಾಣುತ್ತಿದ್ದರು. ಅವರಿಗಿಂತ ಮೊದಲು ಬಂದ ಮಠದ ಹುಡುಗರು, ಜಿಂಕೆ ಚರ್ಮದ ಸುರಳಿ ಬಿಚ್ಚಿ ಬೆತ್ತದ ಕುರ್ಚಿಯ ಮೇಲೆ ಹಾಸಿದರು. ಅದರ ಮೇಲೆ ದಿಂಬು ಇಟ್ಟು ಕಾವಿ ಮಡಿಬಟ್ಟೆ ಹರಡುವವರೆಗೆ ನಿಂತೇ ಇದ್ದ ಸ್ವಾಮಿಗಳು ನಂತರ ಕೂತು ಒಂದು ಕ್ಷಣ ಕಣ್ಣು ಮುಚ್ಚಿದರು. ಏನನ್ನೋ ಧ್ಯಾನಿಸಿ, ಕಣ್ಣು ತೆರೆದರು. ಅವರೆದುರು ಹೊಸಳ್ಳಿಯ ಪ್ರಮುಖರೆಲ್ಲ ಇನ್ನೂ ನಿಂತೇ ಇದ್ದಾರೆ!